ನಕ್ಷತ್ರಪಟ



ಟಿ.ಎಸ್. ನಾಗರಾಜ ಶೆಟ್ಟಿ
ಕಲೆ: ಸಂತೋಷ್ ಸಸಿಹಿತ್ಲು

# ನೀರು ನೀರು

ನೀರೆ ನೀರೇ ಪಂಚಭೂತಗಳಲಿ ನೀನೇ ಮೊದಲು
ಜೀವಿಜೀವಿಗಳಲಿ ಜೀವ ತುಂಬುವಲ್ಲಿ
ನಿನಗಿಲ್ಲ ಬದಲು

ಅದಲು ಬದಲು ಕಂಚಿ ಕದಲು
ಆಡಲು ಆಗದು ಇಲ್ಲಿ
ಪ್ರಾಣಿಗು ಪಕ್ಷಿಗು ಕ್ರಿಮಿಗೂ ಕೀಟಕು
ನೀನೇ ಬೇಕಿಲ್ಲಿ

ಎಲ್ಲೆಡೆ ನಡೆದರೆ ಜೀವ ಜಲದ
ಅಪವ್ಯಯ
ಜೀವ ಕೋಟಿಗಳೆಲ್ಲಕು
ತಪ್ಪದು ಅಪಾಯ

ಎಣಿಸಿದರೆಷ್ಟು ನಿನ್ನ
ಹಲವವತಾರ
ಹಿಮ ಪರ್ವತದಲ್ಲಿ
ಘನ ಆಕಾರ

ವಾಯುವಿನಲ್ಲೂ ಆವಿಯ
ರೂಪವ ನೀ ತಳೆದಿರುವೆ
ಕೆರೆ ಕಟ್ಟೆಗಳು ಹೊಳೆ ನದಿಗಳಲಿ
ದ್ರವರೂಪವ ಪಡೆದಿರುವೆ

ಇರಲಿ ಶುದ್ಧ ರೂಪದಲಿ
ನಮಗೀ ನೀರೇ ಪ್ರಾಣ
ಮಲಿನ ಮಾಡಿದರೆ ನಾಳೆ ದಿನಗಳಲಿ
ನಮಗಿನ್ನೆಲ್ಲಿಯ ತ್ರಾಣ?

